dd-375
T.P.-2

(1)

Reg B G No.155 ಶ್ರೀ 19-9-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52nd Year of Publication

ಸ್ಥಾಪಕರು : ಅರಮನೆಸಿರಸ್ತೇದ್ದಾರ್ ಎಂ. ವಿಶ್ವಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನೈಸೆ

ಪಾಂಡಿಚೆರಿಯಲ್ಲಿ ಅಧಿಕಾರ ಆಡಳಿತ ಜಾರಿ

ಪರಿಶೀಲನೆ ಅಗತ್ಯ

ಮೈಸೂರು ನಗರೋತ್ಥಾನ ಸಭೆಯನ್ನು ಕಾರ್ಪೊರೇಷನ್ ಆಗಿ ಮಾಡುವ ಕುರಿತು ಮುಖ್ಯಮಂತ್ರಿ ಶ್ರೀ ಕೆ. ಪುಟ್ಟಸ್ವಾಮಿಯವರು ಎಚ್ಚರಿಕೆ ನುಡಿಗಳನ್ನಾಡಿದ್ದಾರೆ. ಈ ಬಗ್ಗೆ ಸ್ವತಃ ತಮ್ಮ ನಿರ್ಧುತ್ಸಾಹ ತೋರಿದ್ದಾರೆ.

ಕಾರ್ಪೊರೇಷನ್ ರಚನೆ ಮಾಡುವುದರಲ್ಲಿ ಮುಖ್ಯವಾಗಿ ಬರುವ ಪ್ರಶ್ನೆಯೆಂದರೆ ಹಣ. ಬೆಂಗಳೂರು, ಹುಬ್ಬಳ್ಳಿ ಕಾರ್ಪೊರೇಷನ್‌ಗಳೇ ಹಣದ ಮುಗ್ಗಟ್ಟಿನಿಂದ ಪಾರಾಗಿಲ್ಲ ಎಂದು ಮುಖ್ಯಮಂತ್ರಿಯವರು ಸೂಚಿಸಿದ್ದಾರೆ.

ಮೈಸೂರು ನಗರದಲ್ಲಿ ಹಣ ಉತ್ಪಾದನೆಗೆ ಅವಕಾಶ ಅಲ್ಪ. ಕೈಗಾರಿಕೆಗಳಿಲ್ಲ. ಇರುವುದರಲ್ಲೇ ಅನುಸರಿಸಬೇಕು. ಎಂದರೆ ಕಾರ್ಪೊರೇಷನ್ ಆದರೆ ಹೊರಬೇಕಾದ ಭಾರಿ ಹಣದ ಹೊರೆಯನ್ನು ಮೈಸೂರು ಪೌರಸಭೆ ಹೊರಲು ಸಾಧ್ಯವೇ ಎಂಬುದು ಯೋಚನಾರ್ಹ.

ಕೇವಲ ಅಧಿಕಾರ ದೃಷ್ಟಿಯಿಂದ ಕಾರ್ಪೊರೇಷನ್ ರಚನೆ ಒಳಿತಲ್ಲ. ಕಾರ್ಪೊರೇಷನ್ ರಚನೆ ಬಗ್ಗೆ ನಗರ ಕಾಂಗ್ರೆಸ್ ಸಮಿತಿ ಕೂಲಂಕುಷವಾಗಿ ಪರಿಶೀಲಿಸುವುದು ಶ್ರೀ ಪುಟ್ಟಸ್ವಾಮಿಯವರ ಆಭಿಪ್ರಾಯವಾಗಿದೆ.

ಕೇಂದ್ರಕ್ಕೆ ಶಿಫಾರಸು

ಬೇಸಾಯದರ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿ, ಮುಂದಿನ ಕಾಲಿನ ಬೆಳೆಯಿಂದ ಶೇಕಡ 80 ರಿಂದ 90 ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯ ಸಂಗ್ರಹಿಸುವ ಗುರಿ ಹೊಂದಬೇಕೆಂದು ತಿಳಿಸಿದೆ.

ಒಟ್ಟು ಮಂಗಳೂರು ಪೌರಸಭೆಯ 37 ಸ್ಥಾನಗಳಿಗೆ 87 ಮಂದಿ ಸ್ಪರ್ಧಿಸಿದ್ದಾರೆ ಚುನಾವಣೆ ಬರುವ ಅಕ್ಟೋಬರ್ 8 ರಂದು.

ರಾಷ್ಟ್ರಪತಿಯವರು ಪಾಂಡಿಚೆರಿ ಆಡಳಿತವನ್ನು ನಿನ್ನೆ ತಮ್ಮ ವಶಕ್ಕೆ ತೆಗೆದುಕೊಂಡರು. ಗೃಹ ಶಾಖೆಯ ಕಿರಿಯ ಪ್ರಧಾನ ಕಾರ್ಯದರ್ಶಿಯವರು ಅಲ್ಲಿಗೆ ತೆರಳಿ ಅಧಿಕಾರ ಸ್ವೀಕರಿಸಿದರು. ಪಾಂಡಿಚೆರಿಯ ಮುಖ್ಯ ಕಾರ್ಯದರ್ಶಿ ಶ್ರೀ ಕೆ. ಕೃಷ್ಣಮೂರ್ತಿಯವರು ಅಧಿಕಾರ ಹಸ್ತಾಂತರ ಮಾಡಿದರು.

★

ವಿರೋಧಪಕ್ಷದ ಒತ್ತಾಯ

ವಿಧಾನ ಸಭೆಯಾ ಅಧಿವೇಶನವನ್ನು ಕರೆಯಬೇಕೆಂದು ರಾಜಾಸ್ಥಾನದ ವಿರೋಧ ಪಕ್ಷದ ಸದಸ್ಯರು ರಾಜ್ಯಪಾಲರಿಗೆ ಮನವಿ ನೀಡಿದ್ದಾರೆ. ಮಂತ್ರಿಮಂಡಲ ಮೇಲೆ ಅವಿಶ್ವಾಸ ನಿರ್ಣಯ ಚರ್ಚಿಸಲು ಸಭೆ ಕರೆಯಬೇಕೆಂದು ಒತ್ತಾಯ ಮಾಡಿರುವರು. ಅವಿಶ್ವಾಸ ತಡೆಯುವುದನ್ನು ಸ್ವೀಕರರು ತಿಳಿದ್ದು ಸಭೆಯನ್ನು ಎಷ್ಟೊಂದುವರಿಸಿಲುವರು ಎಂದು ವಿರೋಧ ಪಕ್ಷದವರು ಆರೋಪಿಸಿರುವರು.

ನಿಷೇಧಾಜ್ಞೆ ಜಾರಿ

ತಮ್ಮ ವ್ಯಾಪ್ತಿಗೆ ಒಳಪಟ್ಟ ಬೆಂಗಳೂರು ಮತ್ತಿತರ ಪ್ರದೇಶಗಳಲ್ಲಿ ಇಂದಿನಿಂದ ಜಾರಿಗೆ ಬರುವಂತೆ ಒಂದು ವಾರದ ಅವಧಿಯ ನಿಷೇಧಾಜ್ಞೆಯನ್ನು ಪೊಲೀಸ್ ಕಮೀಷನರ್ ಶ್ರೀ ಖಾನ್ ಆಲಿಯವರು ಘೋಷಿಸಿರುವರು. ಈ ಘೋಷಣೆಯ ಪ್ರಕಾರ ಸಭೆ, ಮೆರವಣಿಗೆ ನಡೆಯುವಂತಿಲ್ಲ ಅವರ್ಗು ಪೊಲೀಸ್ ಠಾಣೆಯ ಲಿಖಿತ ಅನುಮತಿಯಿಂದ ಆಜ್ಞೆ ಹೊರಡಿಸಿ ಪ್ರತಿಬಂಧ ಮೆರವಣಿಗೆ, ಘೋಷಣೆ ಕೂಗುವುದು ಆಯುಧಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಿದ್ದಾರೆ. ಕೇಂದ್ರ ನೌಕರರು ಮುಷ್ಕರ ಸಂದರ್ಭದಲ್ಲಿ ಈ ಆಜ್ಞೆ ಹೊರಟಿದೆ.

○ 3 ಮಂದಿ ಕಾಂಗ್ರೆಸ್ ಮಂತ್ರಿಗಳ ರಾಜೀನಾಮೆಯಿಂದ ಹರಿಯಾಣ ಮಂತ್ರಿ ಮಂಡಲಕ್ಕೆ ಧಕ್ಕೆ ಇಲ್ಲವೆಂದು ವರದಿ.

ಚಿನ್ನ ಶೋಧನೆ

ಧಾರವಾಡ ಹತ್ತಿರದ ಕಪ್ಪಡಗುಡ್ಡ ಪ್ರದೇಶದಲ್ಲಿ ಚಿನ್ನ ಸಿಕ್ಕಿದೆ.

★

ಮುಷ್ಕರ ಮುಂದುವರಿಕೆ

ಕಲ್ಕತ್ತಾದ ಸ್ಟೇಟ್ಸ್‌ಮನ್, ಬೊಂಬಾಯಿನ ಟೈಂಸ್ ಆಫ್ ಇಂಡಿಯಾ ಕಚೇರಿಯಲ್ಲಿ ನೌಕರರ ಮುಷ್ಕರ ನಡೆಯುತ್ತಿದೆ.

★

ಡಾಂಗೆಯವರ ಟೀಕೆ

ನೌಕರರ ವಿರುದ್ಧ ಬಲಪ್ರಯೋಗ ನಡೆಯುತ್ತಿದೆ ಎಂದು ಕಮ್ಯೂನಿಸ್ಟ್ ಪಕ್ಷದ ನ್ಯಾಯುಕ್ತ ಶ್ರೀ ಎಸ್. ಎ. ಡಾಂಗೆ ತಿಳಿಸಿದ್ದಾರೆ.

★

ಸಾವಿರ ಜನರ ಬಂಧನ

ಒಂದು ಸಾವಿರ ಜನ ಕೇಂದ್ರ ಸರ್ಕಾರದ ಕೆಲಸಗಾರರನ್ನು ನವ ದೆಹಲಿಯಲ್ಲಿ ನಿನ್ನೆ ಬಂಧಿಸಿದೆ. ಪ್ರದರ್ಶನಕಾರರ ಮೇಲೆ ಅಶ್ರುವಾಯು ಪ್ರಯೋಗವಾಗಿದೆ.

★

ಮೂರು ಸಾವಿರ ಸಂಬಳ

ತಿಂಗಳಿಗೆ ಮೂರು ಸಾವಿರ ರೂ. ಗಳ ಸಂಬಳವನ್ನು ಮೈಸೂರು ರಾಜ್ಯ ಯೋಜನೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಉಪಾಧ್ಯಕ್ಷರಿಗೆ ಗೊತ್ತು ಮಾಡಿದೆ.

★

ಪ್ರತಿಬಂಧಕ

ಈ ತಿಂಗಳು 25 ರವರೆಗೆ ದೆಹಲಿ ಪ್ರದೇಶದಲ್ಲಿ ಸಭೆ, ಮೆರವಣಿಗೆ ಮತ್ತು ಪ್ರದರ್ಶನಗಳ ಮೇಲೆ ಪ್ರತಿಬಂಧಾಜ್ಞೆ ಜಾರಿ ಮಾಡಿದೆ.

★ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಬೆಂಗಳೂರು–ಮಂಗಳೂರು ರಸ್ತೆಯನ್ನು ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ಒತ್ತಾಯ ಮಾಡಿದೆ.

ಸತ್ಯವಾದಿಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ, ಶುಭ ಹೋರೈಸುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ. ಮೋದ್ಗಿಯವರು ಡಾ|| ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ: 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

● ರಾಜ್ಯದ ಆದ್ಯಂತ ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಪೊಲೀಸ್ ವ್ಯವಸ್ಥೆ ಆಗಿದೆ ಎಂದು ಬೆಂಗಳೂರಿನಲ್ಲಿ ವಕ್ತಾರರೋರ್ವರು ತಿಳಿಸಿದರು.

○ ಕಾನ್ಪುರದಲ್ಲಿ ಶ್ರೀ ಎಸ್. ಎಂ. ಬ್ಯಾನರ್ಜಿಯವರ ಬಂಧನವಾಗಿರುವುದಾಗಿ ವರದಿಯಾಗಿದೆ.

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಕಾತ್ಯಾಯನಃ ॥ ಶ್ರೋತ್ರಿಯಂಸುಭಗಂಗಾಂಚಲಿಗ್ನಿಹುಗ್ನಿಚಿತಂತಥಾ ।
ಪ್ರಾತರುತ್ಥಾಯಯಃಪಶ್ಯೇತ್ ಆರ್ತಿಭ್ಯಸ್ಸವಿಮುಚ್ಯತೇ ॥
ಪಾಪಿಷ್ಟಂದುರ್ಭಗಂಮಧ್ಯಂನಗ್ನ ಮುತ್ಕೃತ್ತನಾಸಿಕಂ ।
ಪ್ರಾತರುತ್ಥಾಯಯಃಪಶ್ಯೇತ್ತತ್ಕಳೇರುಪಲಕ್ಷಣಂ ॥

ಮನುಃ ॥ ಪೃತ್ಯಗ್ನಿಂ ಪ್ರತಿಸೂರ್ಯಂಚ । ಪ್ರತಿಸೋಮೋದಕದ್ವಿಜಾ ॥
ಪ್ರತಿಗಾಂ ಪ್ರತಿಸಂಧ್ಯಾಂಚ । ಪ್ರಜ್ಞಾನಶೃತಿಮೇಹತಃ ॥

ಆಪಸ್ತಂಭಃ ॥ ನಸೋಪಾನನ್ಮಾತ್ರಪುರಿಷೇಕುರ್ಯಾತ್ ॥
ದಕ್ಷಃ ॥ ಶೌಚೇಯತ್ನಸ್ಸದಾಕಾರ್ಯಃ ತನ್ಮೂಲೋಹಿದ್ವಿಜಸ್ಯತಃ ।
ಶೌಚಾಚಾರವಿಹೀನಸ್ಯ ಸಮಸ್ತಾಃನಿಷ್ಫಲಾಃಕ್ರಿಯಾಃ ॥
ಯಸ್ಯಶೌಚೇಪಿಶೈಥಿಲ್ಯಂವೃತ್ತಂತಸ್ಯಪರೀಕ್ಷಿತಂ ॥
ತಸ್ಮಾತ್ಸರ್ವಪ್ರಯತ್ನೇನ ದ್ವಿಜಃ ಶೌಚಂ ಸಮಾಚರೇತ್ ॥

ಹಾಸಿಗೆಯಿಂದ ಎದ್ದು ಪಾದಪ್ರಕ್ಷಾಳನಾನಂತರ ಆಚಮನವನ್ನು ಮಾಡಿ ಮುಂದೆ ಹೇಳುವ ಮಂತ್ರೋಚ್ಚಾರಣದೊಡನೆ ಭೂಸ್ಪರ್ಶ ಮಾಡಬೇಕು.

ಸಮುದ್ರವೇ ಡಾಬಾಗುಳ್ಳ ಪರ್ವತಪ್ತನಾಲಂಕೃತೆಯಾದ ವಿಷ್ಣುಪತ್ನಿಯಾದ ಭೂದೇವಿಯೇ ನನ್ನ ಪಾದಸ್ಪರ್ಶವನ್ನು ಕ್ಷಮಿಸು.

ಪ್ರಾತಃಕಾಲದಲ್ಲಿ ಎದ್ದು ಶ್ರೋತ್ರಿಯನನ್ನು, ಸೌಭಾಗ್ಯಶಾಲಿಯನ್ನು, ಹಸುವನ್ನು, ಅಗ್ನಿಯನ್ನು ದೀಕ್ಷಿತನನ್ನು ಯಾವನು ಪ್ರಥಮತಃ ನೋಡುತ್ತಾನೋ, ಅವನು ಆ ದಿವಸ ಸುಖಿಯಾಗಿರುತ್ತಾನೆ.

Help The Gorakshana

ಗೋವಧೆ ಕೂಡಲೆ ನಿಶೇಧವಾಗಲಿ

Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

Cow Slaughter should be banned Immediately

SHAKTI SUDHA

A Superb Tonic

ವುಡ್‌ಲಾಂಡ್ಸ್ ಜನಭೂಷಿತ 2ನೇ ವಾರ

ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಂಚುಗಳ್ಳಿ ರೂಪಾಯಿಸಿ ಅತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ನಹಿಂದಾ ಹಹಿಮೂ, ಮನೂಜ್‌ಕುಮಾರ್, ರಾಜ್‌ಕುಮಾರ್

ಬಾಳ್‌ರಾಜ್ ಸಹಾನಿ, ಅಜಿತಾ ಪಹಾರ್, ಡೇವಿಡ್, ಶಿಶಿಕಲಾ, ಮಹಮೂದ್

ಆಪೆರ— ಜನಪ್ರಿಯ 3 ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ

ಶಮ್ಮಿ ಕಪೂರ್, ರಾಜಶ್ರೀ, ಮನ್ಮೂಜ್, ಪ್ರಾಣ್, ಮಹಮೂದ್

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India s rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Printing — Neat Binding

Lakshminarasimha Press

Sivarampet, Mysore

ಅಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

Edited, Printed & Published by Dharmaprachara Nirata M. S Krishna Rao (Proprietor) at the Satyavadi Press Chamarajapuram, Mysoe 4